

ಭಾರತ ಕ್ರಿಕೆಟ್ ತಂಡ ಚಾಂಪಿಯನ್ಸ್ ಟ್ರೋಫಿ ಜಯಿಸಿದಾಗ

ವರ್ಷ ಹೇಳಿಕೊಳ್ಳುವಂತಹ ಸಾಧನೆಯೇನೂ ಇಲ್ಲ. ಸುನಿಲ್ ಚೆಟ್ರಿ ನಿವೃತ್ತಿ ನಿರ್ಧಾರ ಹಿಂಪಡೆದು ಬಂದು ಭಾರತ ತಂಡವನ್ನು ಪ್ರತಿನಿಧಿಸಬೇಕಾಯಿತು. ಇಂಡಿಯನ್ ಸೂಪರ್ ಲೀಗ್ ಟೂರ್ನಿಯೂ ಈ ಬಾರಿ ನಡೆಯಲಿಲ್ಲ.

ಈ ಮಧ್ಯೆ ಅರ್ಜೆಂಟೀನಾದ ತಾರೆ ಲಯೊನೆಲ್ ಮೆಸ್ಸಿ ಭಾರತ ಭೇಟಿಯು ದೊಡ್ಡ ಸುದ್ದಿ ಮಾಡಿತು. ಕೋಲ್ಕತ್ತದ ಸಾಲ್ಟ್ ಲೇಕ್ ಮೈದಾನದಲ್ಲಿ ತಮ್ಮ ನೆಚ್ಚಿನ ತಾರೆಯನ್ನು ನೋಡಲು ಅಡ್ಡಿಪಡಿಸಲಾಯಿತು ಎಂಬ ಕಾರಣಕ್ಕೆ ಅಭಿಮಾನಿಗಳು ದಾಂದಲೆ ಮಾಡಿದರು. ಆದರೆ ಮುಂಬೈ, ಹೈದರಾಬಾದ್ ಮತ್ತು ದೆಹಲಿಯಲ್ಲಿ ಮೆಸ್ಸಿ ಕಾರ್ಯಕ್ರಮಗಳು ಸಾಂಗವಾಗಿ ನಡೆದವು.



ಬಿಹಾರದಲ್ಲಿ ನಡೆದ ಏಷ್ಯನ್ ಹಾಕಿಯಲ್ಲಿ ಹರ್ಮನ್‌ಪ್ರೀತ್ ಸಿಂಗ್ ನಾಯಕತ್ವದ ಭಾರತ ತಂಡವು ಚಾಂಪಿಯನ್ ಆಯಿತು. ಚೆನ್ನೈನಲ್ಲಿ ಜೂನಿಯರ್ ಏಷ್ಯಾ ಕಪ್ ಹಾಕಿ ಟೂರ್ನಿಗಳೂ ನಡೆದವು.

ದಿಗ್ಗಜ ಟೆನಿಸ್ ಆಟಗಾರ, ಕನ್ನಡಿಗ ರೋಹನ್ ಬೋಪಣ್ಣ ಅವರು ವೃತ್ತಿಪರ ಟೆನಿಸ್‌ಗೆ ನಿವೃತ್ತಿ ಘೋಷಿಸಿದರು.

ಈ ವರ್ಷ ಬೆಂಗಳೂರಿನ ಕರ್ನಾಟಕ ರಾಜ್ಯ ಲಾನ್‌ಟೆನಿಸ್ ಸಂಸ್ಥೆಯು ಇದೇ ಮೊದಲ ಸಲ ಬಿಲ್ಲಿ ಜೀನ್ ಕಿಂಗ್ ಕಪ್ ಟೂರ್ನಿಯನ್ನು ಆಯೋಜಿಸಿತು. ಭಾರತ, ಸ್ಲೊವೆನಿಯಾ ಮತ್ತು ನೆದರ್ಲೆಂಡ್ಸ್ ತಂಡಗಳು ಭಾಗವಹಿಸಿದ್ದವು.

ಕರ್ನಾಟಕದ ಈಜು ತಾರೆ ಶ್ರೀಹರಿ ನಟರಾಜ್ ಅವರು ಏಷ್ಯಾ ಈಜುಕೂಟದಲ್ಲಿ ಅಮೋಘ ಸಾಧನೆ ಮಾಡಿದರು.

## ನೂತನ ಕ್ರೀಡಾ ನೀತಿ

ಭಾರತ ಸರ್ಕಾರವು ಬಹುನಿರೀಕ್ಷಿತ ನೂತನ ಕ್ರೀಡಾ ಕಾಯಿದೆಯನ್ನು ಈ ವರ್ಷ ಜಾರಿಗೊಳಿಸಿತು. ಇದರಿಂದಾಗಿ ಕ್ರೀಡಾ ಫೆಡರೇಷನ್‌ಗಳ ಕಾರ್ಯನಿರ್ವಹಣೆಯ ವೈಖರಿ ಬದಲಾಗುವ ನಿರೀಕ್ಷೆ ಮೂಡಿದೆ. ಭಾರತ ಕ್ರಿಕೆಟ್ ನಿಯಂತ್ರಣ ಮಂಡಳಿಯೂ ಸೇರಿದಂತೆ ಬಹುತೇಕ ಎಲ್ಲ ಫೆಡರೇಷನ್‌ಗಳು ಈ ಕಾಯಿದೆಗೆ ಒಳಪಡಲಿವೆ.


ಓದುಗರಿಗೂ ಸುಗ್ಗಿ ಕಾಲ

ಸುಧಾ

ಯುಗಾದಿ ವಿಶೇಷಾಂಕ-2026

ಓದುಗರ ಸಹಭಾಗಿತ್ವ ಇಲ್ಲದೆ 'ಯುಗಾದಿ ಸಂಚಿಕೆ' ಕಳೆಗಟ್ಟುವುದು ಹೇಗೆ? ಇದೋ ಇಲ್ಲಿದೆ, ಓದುಗರ ಅಭಿವ್ಯಕ್ತಿಗೊಂದು ಆಹ್ವಾನ. 2026ರ 'ಸುಧಾ' ಯುಗಾದಿ ವಿಶೇಷಾಂಕಕ್ಕಾಗಿ ಓದುಗರ ವೇದಿಕೆಗೆ ಎರಡು ವಿಷಯಗಳನ್ನು ಸೂಚಿಸಲಾಗಿದೆ.

ಓದುಗರ ವೇದಿಕೆ


ಪೇಚು ತಂದ ಪ್ರೇಮ ನಿವೇದನೆ


ಬದುಕು ಬದಲಿಸಿದ ಪುಸ್ತಕ

- ಬರಹಗಳು 250 ಶಬ್ದ ಮೀರದಿರಲಿ.
- ಸ್ಪರ್ಧೆಗೆ ಕಳುಹಿಸುವ ಬರಹಗಳು ಪತ್ರಿಕೆ, ನಿಯತಕಾಲಿಕೆ, ಬ್ಲಾಗ್, ಜಾಲತಾಣ, ಸಾಮಾಜಿಕ ಜಾಲತಾಣ ಸೇರಿದಂತೆ ಯಾವುದೇ ಮಾಧ್ಯಮದಲ್ಲಿ ಈ ಮೊದಲು ಪ್ರಕಟಗೊಂಡಿರಬಾರದು.
- ಬರಹದ ಜೊತೆಯಲ್ಲಿ ಪ್ರತ್ಯೇಕ ಹಾಳೆಯಲ್ಲಿ ವಿಳಾಸ, ದೂರವಾಣಿ ಸಂಖ್ಯೆ ಬರೆಯಿರಿ. ಜೊತೆಗೆ ನಿಮ್ಮ ಫೋಟೊ ಕೂಡ ಇರಲಿ.
- ಲಕೋಟೆ ಮೇಲೆ ಅಥವಾ ಇಮೇಲ್‌ನಲ್ಲಿ 'ಯುಗಾದಿ ಓದುಗರ ವೇದಿಕೆ'ಗೆ ಎಂದು ನಮೂದಿಸಿ.
- 'ದಿ ಪ್ರಿಂಟರ್ಸ್ ಮೈಸೂರು ಪ್ರೈವೇಟ್ ಲಿಮಿಟೆಡ್' ಸಿಬ್ಬಂದಿ ಮತ್ತು ಅವರ ಕುಟುಂಬ ವರ್ಗದವರು ಸ್ಪರ್ಧೆಯಲ್ಲಿ ಭಾಗವಹಿಸುವಂತಿಲ್ಲ.
- ನುಡಿ–ಯುನಿಕೋಡ್‌ನಲ್ಲಿ ಪ್ರಬಂಧಗಳನ್ನು ಇ–ಮೇಲ್ ಮಾಡಬಹುದು.

ಕೊನೆಯ ದಿನಾಂಕ
ಜನವರಿ 20, 2026

ವಿಳಾಸ: ಸಂಪಾದಕರು,
ಸುಧಾ ಯುಗಾದಿ ವಿಶೇಷಾಂಕ, ಓದುಗರ ವೇದಿಕೆ, ನಂ. 75, ಮಹಾತ್ಮ ಗಾಂಧಿ ರಸ್ತೆ, ಬೆಂಗಳೂರು-560001

ಇ–ಮೇಲ್: ugadi@sudha.co.in